ಹೇಳುತ್ತಾರೆ. ಮಾರನೆಯ ದಿನ ಸ್ವಾಮಿಯವರನ್ನು ಬರೂವ ತಮ್ಮ ಮನೆಗೆ ಕರೆಯುತ್ತಾರೆ: 'ವಿಶಾಲವಾದ ಮನೆಯ ಒಂದು ಫ್ಲೋರ್‌ನಲ್ಲಿ ಸುಸಜ್ಜಿತವಾದ ಲೈಬ್ರರಿ. ನನ್ನನ್ನು ಕರೆದು 'ಬುಕ್ ನಂಬರ್ 423 ತೆಗೆದುಕೊಂಡು ಬಾ. ಅದರಲ್ಲಿ ಮಾರ್ಕ್ ಮಾಡಿಟ್ಟಿದ್ದೇನೆ. ಅದನ್ನು ನಿಮ್ಮ ಅರಸುಗೆ ತೋರಿಸು' ಎಂದರು ಬರೂವ. ಅದು ಆಂತ್ರೋಪಾಲಜಿ (ಮಾನವಶಾಸ್ತ್ರ) ಪುಸ್ತಕ. ಅದು ಜಗತ್ತಿನ ಜನಸಮುದಾಯಗಳನ್ನು ವಿಶ್ಲೇಷಣೆ ಮಾಡಿದ್ದ ಪುಸ್ತಕ. ಅವರು ಮಾರ್ಕ್ ಮಾಡಿದ್ದ ಪುಸ್ತಕ ತೆಗೆದು ನೋಡಿದೆ: ಅದರಲ್ಲಿ ಕ್ಯಾರಕ್ಟರ್ ಆಫ್ ದಟ್ ಕಮ್ಯುನಿಟಿ – ಅನ್‌ಪ್ರೆಡಿಕ್ಟಬಲ್ ಫೆಲೋ' ಅಂತ ಬರೆದಿದ್ದರು. ಬರೂವ ಅವರ ಮುಖ ನೋಡಿದೆ; 'ಇಷ್ಟರ ಮೇಲೆ ನಿಮ್ಮ ಹಣೆ ಬರಹ' ಅಂದರು.'

ಒಂಥರದ ಹಿಂದಿ 'ಕವಿ'ಯೂ ಆಗಿದ್ದ ದೇವಕಾಂತ ಬರೂವ ಇಂದಿರಾ ಗಾಂಧಿಯವರ ಮಹಾ ಭಟ್ಟಂಗಿಯಾಗಿದ್ದರು; 'ಇಂದಿರಾ ಈಸ್ ಇಂಡಿಯಾ; ಇಂಡಿಯಾ ಈಸ್ ಇಂದಿರಾ' ಎಂಬ ಘೋಷಣೆ ಹೊಸೆದಿದ್ದರು! ಎರಡು ವರ್ಷ ಕಾಂಗ್ರೆಸ್ ಅಧ್ಯಕ್ಷರೂ ಆಗಿದ್ದರು. ಮೇಲೆ ಹೇಳಿದ ಪ್ರಸಂಗದಲ್ಲಿ ಬರೂವ 'ಮಾನವಶಾಸ್ತ್ರೀಯ' ಎನ್ನಲಾದ ಮಾಹಿತಿಗಳನ್ನಾಧರಿಸಿ ಹಿಂದುಳಿದ ಜಾತಿಗಳ ನಾಯಕರನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದ ಅಪಾಯಕರ ಕ್ರಮವನ್ನು ಗಮನಿಸಿ. ಇಂಥ ರಾಜಪುರೋಹಿತರು ಆ ಕಾಲಕ್ಕೆ ಯಾವ್ಯಾವ ರೀತಿಯಲ್ಲಿ ದೇಶದಾದ್ಯಂತ ಸಹಸ್ರಾರು ಶೂದ್ರ, ದಲಿತ ಜಾತಿಗಳ ರಾಜಕಾರಣಿಗಳ ಭವಿಷ್ಯವನ್ನು ಮುಗಿಸಿರಬಹುದು ಎಂಬುದನ್ನು ಊಹಿಸಿಕೊಳ್ಳಿ! ಈ ಬರೂವಾ 'ಸಂಶೋಧನೆ'ಯನ್ನು ಅರಸು ತಿರಸ್ಕರಿಸಿದರು; ಬಂಗಾರಪ್ಪ ಮಂತ್ರಿಯಾದರು. ಆ ಮಾತು ಬೇರೆ. ಅಸ್ಸಾಮಿ ಬ್ರಾಹ್ಮಣರಾಗಿದ್ದ ಬರೂವಾ ಥರದ 'ರಾಜಕೀಯ ವಿಜ್ಞಾನಿಗಳು' ಇವತ್ತಿಗೂ ಅನೇಕ ರಾಜಕೀಯ ಪಕ್ಷಗಳ ತೆರೆಮರೆಯಲ್ಲಿ ಎಂತೆಂಥ ಅರೆಬೆಂದ 'ಸಂಶೋಧನಾ' ಪುಸ್ತಕಗಳ ಮೂಲಕ, ಜ್ಯೋತಿಷಿಗಳು–ಕವಡೆ ಶಾಸ್ತ್ರದವರ ಮೂಲಕ ದೇಶದ ಶೂದ್ರ, ದಲಿತ ರಾಜಕಾರಣವನ್ನು ನಿಯಂತ್ರಿಸುತ್ತಿರಬಹುದು ಎಂಬುದನ್ನು ನೆನೆದರೆ ಗಾಬರಿಯಾಗುತ್ತದೆ.

ಹೀಗೆ 'ನಮ್ಮ ಅರಸು' ಪುಸ್ತಕ ಸುಮಾರು ಐವತ್ತು ವರ್ಷಗಳ ಭಾರತೀಯ ರಾಜಕಾರಣದ ಅಗೋಚರ ಮುಖಗಳನ್ನೂ ಹೊರತಂದಿದೆ. ಹಾಗೆಯೇ, ದೇವರಾಜ ಅರಸರ ರಾಜಕಾರಣ ದನಿಯಲ್ಲದ ಸಮುದಾಯಗಳಿಗೆ ತೆರೆದ ಹೊಸ ಬಾಗಿಲುಗಳನ್ನು ಕೂಡ ಕಾಣಿಸುತ್ತದೆ. ಚರಿತ್ರೆಯಲ್ಲಿ ಎಂದೂ ಅಧಿಕಾರದ ಹತ್ತಿರ ಕೂಡ ಸುಳಿಯಲಾಗದ ಜನರಿಗೆ ಅಧಿಕಾರ ಹಾಗೂ ರಾಜಕೀಯ ಶಕ್ತಿಯನ್ನು ನೀಡುವ ಗುರಿ, ಬದ್ಧತೆಗಳು ಅರಸು ರಾಜಕಾರಣದ ಮುಖ್ಯ ನೆಲೆಗಳಾಗಿದ್ದವು. ಅಲೆಮಾರಿ ಸಮುದಾಯದಲ್ಲಿ ಹುಟ್ಟಿ ಕಾನೂನು ಪದವಿ ಪಡೆದ ಎಂ.ಎಸ್. ಹೆಳವರ್ ದೇವರಾಜ ಅರಸರನ್ನು ಭೇಟಿ ಮಾಡಿದ ಮೇಲೆ ಆ ಸಮುದಾಯದ ಕಷ್ಟಗಳು ಅರಸು ಅವರಿಗೆ ಅರಿವಾಗತೊಡಗುತ್ತವೆ. ಇಂಥ ಅಂಚಿನ ಸಮುದಾಯಗಳ ಬಿಡುಗಡೆಗಾಗಿ ಅರಸು ಕೈಗೊಂಡ ಕ್ರಮದಿಂದಾಗಿ, ಅವರು ಜಾರಿಗೆ ತಂದ ಹಾವನೂರ್ ವರದಿಯ ಪರಿಣಾಮದಿಂದಾಗಿ ಈ ಅಲೆಮಾರಿ ಸಮುದಾಯದ ಚಿತ್ರವೇ ಬದಲಾದದ್ದನ್ನು ಕುರಿತು ಹೆಳವರ್ ಹೇಳುತ್ತಾರೆ:

'ಅವತ್ತು ನಮ್ಮ ಹೆಳವರ ಹಟ್ಟಿಯಲ್ಲಿ ನನ್ನ ಏಕೈಕ ಸೆಕೆಂಡ್ ಹ್ಯಾಂಡ್ ರ್‍ಯಾಲಿ ಸೈಕಲ್ಲೇ ಭಾರಿ ವಾಹನ. ಇವತ್ತು ಇಲ್ಲಿ 7 ಕಾರುಗಳಿವೆ. 11 ಟ್ರ್ಯಾಕ್ಟರುಗಳಿವೆ. 60 ಬೈಕುಗಳಿವೆ. 200 ಕುಟುಂಬಗಳಿವೆ... ಲೆಕ್ಕವಿಲ್ಲದಷ್ಟು ಹುಡುಗ, ಹುಡುಗಿಯರು ಪದವಿ ಪಡೆದು ಎಂಜಿನಿಯರ್, ಡಾಕ್ಟರು, ಲಾಯರುಗಳಾಗಿದ್ದಾರೆ; ಗ್ರಾಮಪಂಚಾಯ್ತಿ ಮೆಂಬರುಗಳಾಗಿದ್ದಾರೆ. ಅದೆಲ್ಲಕ್ಕಿಂತ ಮುಖ್ಯವಾಗಿ ನೆಲೆಯೇ ಇಲ್ಲದ ಹೆಳವರು ಇಂದು ಭೂಮಾಲೀಕರಾಗಿದ್ದಾರೆ.'

ಹೆಳವರ್ ಕೃತಜ್ಞತೆಯಿಂದ ಹೇಳುವ ಈ ಮಾತುಗಳು ಕರ್ನಾಟಕದ ಹಲವು ಹಿಂದುಳಿದ ಜಾತಿ, ವರ್ಗಗಳ ಚಲನೆಗಳನ್ನೂ ಪ್ರತಿನಿಧಿಸುತ್ತವೆ. ರವಿವರ್ಮಕುಮಾರ್ ಗುರುತಿಸುವಂತೆ, 'ಅರಸು